## ಕರ್ನಾಟಕಗ್ಯಾಸೆಟಿಯರ್ ಇಲಾಖೆ

### 2020-21ನೇ ಸಾಲಿನ ವಾರ್ಷಿಕ ವರದಿ

ಸ್ವಾತಂತ್ರ್ಯಪೂರ್ವದಲ್ಲಿ ಪ್ರಕಟಿಸಿದ್ದ ಜಿಲ್ಲಾ ಗ್ಯಾಸೆಟಿಯರ್‌ಗಳನ್ನು ಪರಿಷ್ಕರಿಸುವ ದೃಷ್ಟಿಯಿಂದ ಮತ್ತು ಸ್ವಾತಂತ್ರ್ಯಾನಂತರದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿರುವ ಪ್ರಗತಿಯನ್ನು ಕ್ರೋಢೀಕರಿಸಿ ಜಿಲ್ಲಾ ಗ್ಯಾಸೆಟಿಯರ್‌ಗಳನ್ನು ಪ್ರಕಟಿಸುವ ಉದ್ದೇಶದಿಂದ ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯನ್ನು 1958ರಲ್ಲಿ ಸ್ಥಾಪಿಸಲಾಯಿತು. ಆರಂಭದಲ್ಲಿ ಸಾಮಾನ್ಯ ಪರಿವಿಡಿಯ ಜೊತೆಗೆ ಅಭಿವೃದ್ಧಿ ಹಾಗೂ ಪ್ರಗತಿ ಸೌಲಭ್ಯಗಳನ್ನು ವಿಸ್ತಾರವಾಗಿ ಸೇರ್ಪಡೆ ಮಾಡುವ ದೃಷ್ಟಿಯಿಂದ ಕೇಂದ್ರ ಗ್ಯಾಸೆಟಿಯರ್ ಘಟಕವು ಕೆಲವು ಮಾರ್ಗದರ್ಶನಗಳನ್ನು ರೂಪಿಸಿತ್ತು. ಅದರಂತೆ ಮರುವಿನ್ಯಾಸಗೊಳಿಸಿ ಕೇಂದ್ರ ಸರ್ಕಾರದ ನೀತಿಯಂತೆ 1990ರವರೆಗೆ ಆಗ ಅಸ್ತಿತ್ವದಲ್ಲಿದ್ದ 20 ಜಿಲ್ಲೆಗಳ ಜಿಲ್ಲಾ ಗ್ಯಾಸೆಟಿಯರ್‌ಗಳನ್ನು ಆಂಗ್ಲ ಭಾಷೆಯಲ್ಲಿ ಪ್ರಕಟಿಸಲಾಗಿದೆ. ನಂತರ ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯುಜಿಲ್ಲಾ ಗ್ಯಾಸೆಟಿಯರ್‌ಗಳ ಪರಿಷ್ಕೃತ ಆವೃತ್ತಿಗಳನ್ನು ಕನ್ನಡದಲ್ಲಿ ಪ್ರಕಟಿಸಲು ಪ್ರಾರಂಭಿಸಿ ಇದುವರೆಗೆ ಈ ಮಾಲಿಕೆಯಲ್ಲಿ ಕೊಡಗು, ಧಾರವಾಡ, ಕಲಬುರಗಿ, ವಿಜಯಪುರ, ಮಂಡ್ಯ, ಕೋಲಾರ, ದಕ್ಷಿಣಕನ್ನಡ, ಉಡುಪಿ, ಚಾಮರಾಜನಗರ, ತುಮಕೂರು ಮತ್ತು ಬೀದರ್ ಜಿಲ್ಲಾ ಗ್ಯಾಸೆಟಿಯರ್‌ಗಳನ್ನು ಪ್ರಕಟಿಸಿದೆ.ಜಿಲ್ಲಾ ಗ್ಯಾಸೆಟಿಯರ್‌ಗಳನ್ನು ಕನ್ನಡ ಭಾಷೆಯಿಂದ ಆಂಗ್ಲ ಭಾಷೆಗೆ ಭಾಷಾಂತರಿಸಿ ಪ್ರಕಟಿಸುವ ಕಾರ್ಯಕ್ರಮದಡಿ ಈವರೆಗೆ ಕೊಡಗು, ಧಾರವಾಡ, ಕಲಬುರಗಿ, ವಿಜಯಪುರ, ಮಂಡ್ಯ, ಕೋಲಾರ, ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲಾ ಗ್ಯಾಸೆಟಿಯರ್‌ಗಳನ್ನು ಪ್ರಕಟಿಸಿದೆ.

ಇಲಾಖೆಯು ತಾಲೂಕು ಗ್ಯಾಸೆಟಿಯರ್ ಪ್ರಕಟಣೆ ಯೋಜನೆಯಡಿ ಈ ಕೆಳಕಂಡ ತಾಲ್ಲೂಕುಗಳ ತಾಲೂಕು ಗ್ಯಾಸೆಟಿಯರ್‌ಗಳನ್ನು ಪ್ರಕಟಿಸಿದೆ.

| | |
|---|---|
| ಮೈಸೂರು ಜಿಲ್ಲೆ : | ಕೃಷ್ಣರಾಜನಗರ, ಪಿರಿಯಾಪಟ್ಟಣ, ಹುಣಸೂರು, ಮೈಸೂರು, ನಂಜನಗೂಡು, ಹೆಗ್ಗಡದೇವನಕೋಟೆ ಹಾಗೂ ಟಿ ನರಸಿಪುರ. |
| ದಾವಣಗರೆ ಜಿಲ್ಲೆ : | ದಾವಣಗೆರೆ, ಹರಿಹರ ಹಾಗೂ ಹರಪನಹಳ್ಳಿ |
| ಚಿತ್ರದುರ್ಗ ಜಿಲ್ಲೆ : | ಹಿರಿಯೂರು, ಹೊಸದುರ್ಗ ಹಾಗೂ ಹೊಳಲ್ಕೆರೆ |

ಇಲಾಖೆಯು ಪುನರ್ ಮುದ್ರಣ ಯೋಜನೆಯಡಿ ಈ ವರೆಗೆ 25ಉಪಯುಕ್ತ ಹಾಗೂ ಅಲಭ್ಯ ಗ್ಯಾಸೆಟಿಯರ್ ಸಂಪುಟಗಳನ್ನು ಮರುಮುದ್ರಿಸಿ ಪ್ರಕಟಿಸಿದೆ. ಗ್ಯಾಸೆಟಿಯರ್ ಇಲಾಖೆಯು ಎಲ್ಲಾ ಪ್ರಕಟಣೆಗಳನ್ನು ಇಲಾಖೆಯ ಅಂತರಜಾಲ ತಾಣ www.gazetteer.kar.nic.inರಲ್ಲಿ ಅಳವಡಿಸಿದೆ.

2020-21ನೇ ಸಾಲಿಗೆ ಇಲಾಖೆಗೆ ಒಟ್ಟು 166.00 ಲಕ್ಷ ರೂ.ಗಳ (ವೇತನ ಹಾಗೂ ವೇತನೇತರ) ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ ರೂ.93.75ಲಕ್ಷ ಅನುದಾನ ಖರ್ಚಾಗಿರುತ್ತದೆ.

ಇಲಾಖೆಯು ಜಿಲ್ಲಾ ಗ್ಯಾಸೆಟಿಯರ್‌ಗಳ ಪರಿಷ್ಕರಣಾ ಯೋಜನೆಯಡಿ 2020-21ನೇ ಸಾಲಿನಲ್ಲಿ ಈ ವರೆಗೆ ಬೆಂಗಳೂರು ಜಿಲ್ಲಾ ಗ್ಯಾಸೆಟಿಯರ್‌ನ ಅಧ್ಯಾಯಗಳನ್ನು ಪುಟ ವಿನ್ಯಾಸ ಮಾಡಲು ಕಾರ್ಯಾದೇಶ ನೀಡಲಾಗಿದೆ.

1. ಬೆಂಗಳೂರು ಜಿಲ್ಲಾ ಗ್ಯಾಸೆಟಿಯರ್ 2 ನೇ ಸಲಹಾ ಸಮಿತಿ ಸಭೆ ಪೂರ್ಣಗೊಂಡಿದ್ದು, ಸಲಹಾ ಸಮಿತಿ ಸಭೆಯಲ್ಲಿ ಸಮಿತಿ ಸೂಚಿಸಿರುವ ಸಲಹಾ ಸೂಚನೆಗಳನ್ನು ಅಳವಡಿಸಲು ಕ್ರಮವಹಿಸಲಾಗಿದೆ.
2. ದಾವಣಗೆರೆ ಜಿಲ್ಲೆಯ 1)ಚನ್ನಗಿರಿ, 2)ಜಗಳೂರು, 3)ಹೊನ್ನಾಳಿ ಸಲಹಾ ಸಮಿತಿ ಸಭೆ ಜನವರಿ ಮಾಹೆಯಲ್ಲಿ ಪೂರ್ಣಗೊಳಿಸಿದ್ದು ಸಲಹಾ ಸಮಿತಿ ಸದಸ್ಯರು ಸೂಚಿಸಿರುವ ಸಲಹಾ ಸೂಚನೆಗಳನ್ನು ಅಳವಡಿಸಿಕೊಂಡು ಪರಿಷ್ಕರಿಸಿ ಅಂತಿಮ ಹಂತದ ಮುದ್ರಣ ಕಾರ್ಯಕ್ಕೆ ಸಿದ್ಧಪಡಿಸಲಾಗುತ್ತಿದೆ.
3. ಕೊಪ್ಪಳ ಜಿಲ್ಲೆಯ 1)ಕೊಪ್ಪಳ 2)ಯಲಬುರ್ಗಾ, 3)ಕುಷ್ಟಗಿ 4)ಗಂಗಾವತಿ ಸಲಹಾ ಸಮಿತಿ ಸಭೆ ಪೂರ್ಣಗೊಳಿಸಿದ್ದು ಸಲಹಾ ಸಮಿತಿ ಸದಸ್ಯರು ಸೂಚಿಸಿರುವ ಸಲಹಾ ಸೂಚನೆಗಳನ್ನು ಅಳವಡಿಸಿಕೊಂಡು ಪರಿಷ್ಕರಿಸಿ ಅಂತಿಮ ಹಂತದ ಮುದ್ರಣ ಕಾರ್ಯಕ್ಕೆ ಸಿದ್ಧಪಡಿಸಲಾಗುತ್ತಿದೆ.
4. ರಾಮನಗರಜಿಲ್ಲೆ, ಬೆಂಗಳೂರು ಗ್ರಾಮಾಂತರ, ಮತ್ತು ಚಿಕ್ಕ ಬಳ್ಳಾಪುರ ಜಿಲ್ಲೆಗಳ ಗ್ಯಾಸೆಟಿಯರ್‌ಗಳನ್ನು ಪ್ರಕಟಿಸುವ ಸಂಬಂಧ ದಿ: 17/02/2021 ರಲ್ಲಿ ಚಿಕ್ಕಬಳ್ಳಾಪುರದಲ್ಲಿ ಕಾರ್ಯಾಗಾರವನ್ನು ಏರ್ಪಡಿಸಿದ್ದು, ಅಧ್ಯಾಯ ರಚನಾ ಲೇಖಕರಿಗೆ ಅಧ್ಯಾಯಗಳನ್ನು ರಚಿಸುವ ಬಗ್ಗೆ ತರಬೇತಿ ನೀಡಲಾಯಿತು.

ಮುಖ್ಯ ಸಂಪಾದಕರು
ಕರ್ನಾಟಕ ಗ್ಯಾಸೆಟಿಯರ್ ಇಲಾಖೆ
ಬೆಂಗಳೂರು.